**ಕರ್ನಾಟಕ ಸರ್ಕಾರ**
**ಉಪ ನಿರ್ದೇಶಕರು(ಗ್ರಾಕೈ) ಕಛೇರಿ, ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ, ಜಿಲ್ಲಾ ಆಡಳಿತ ಸಂಕಿರ್ಣ,**
**ಸಿ-ಬ್ಲಾಕ್, ಕೊಠಡಿ ಸಂಖ್ಯೆ-ಸಿ-5, 2ನೇ ಮಹಡಿ ಚಿತ್ತಾಪುರ ರೋಡ್ ಯಾದಗಿರಿ - 585202**
**☎: 08473-253791 💻G-Mail Id: ddkviyadgir@gmail.com**

ಸಂಖ್ಯೆ: ಜಿಪಂಯಾ/ಉನಿ(ಗ್ರಾಕೈ)/ಪತ್ರಿಕಾ ಪ್ರಕಟಣೆ/2023-24 ದಿನಾಂಕ:–11.10.2023

# ಪತ್ರಿಕಾ ಪ್ರಕಟಣೆ

2023-24ನೇ ಸಾಲಿಗೆ **"ಜಿಲ್ಲಾ ಉದ್ಯಮ ಕೇಂದ್ರ"** ಯೋಜನೆಯಡಿ ಗ್ರಾಮೀಣ ಪ್ರದೇಶದ ಮಹಿಳೆಯರಿಗೆ ಹೊಲಿಗೆಯಂತ್ರ ಹಾಗೂ **"ವೃತ್ತಿಪರ ಕುಶಲಕರ್ಮಿಗಳಿಗೆ ಉಚಿತವಾಗಿ ಸುಧಾರಿತ ಸಲಕರಣೆ ಯೋಜನೆ**"ಯಡಿ ಗ್ರಾಮೀಣ ಪ್ರದೇಶದ ವೃತ್ತಿನಿರತ ಕಸಬುಗಳಾದ ಬಡಿಗೆತನ, ಗೌಂಡಿ, ದೋಬಿ, ಕ್ಷೌರಿಕ ಮತ್ತು ಕಮ್ಮಾರಿಕೆ ಕಸಬುದಾರರಿಗೆ ಉಚಿತವಾಗಿ ವಿತರಿಸಲು ಅರ್ಹ ಅಭರ್ಥಿಗಳಿಂದ ಆನ್ ಲೈನ್ ಮುಖಾಂತರ ಅರ್ಜಿ ಆಹ್ವಾನಿಸಲಾಗಿದೆ. ಪ್ರಯುಕ್ತ ಆಸಕ್ತರು ದಿನಾಂಕ:- 12.10.2023 ರಿಂದ ದಿನಾಂಕ:-10.11.2023ರ ವರೆಗೆ ವೆಬ್ ಸೆಟ್ https://zpyadgiri.karnataka.gov.in And https://yadgir.nic.in ಮೂಲಕ ಅರ್ಜಿ ಸಲ್ಲಿಸಬಹುದಾಗಿದೆ. ಅರ್ಜಿ ಸಲ್ಲಿಸಲು ವೃತ್ತಿ ದೃಡೀಕರಣ ಪತ್ರ, ಆಧಾರ ಕಾರ್ಡ, ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಅಭ್ಯರ್ಥಿಗಳಿದ್ದಲ್ಲಿ ಜಾತಿ ಪ್ರಮಾಣ ಪತ್ರ ದಾಖಲಾತಿಗಳೊಂದಿಗೆ ಅರ್ಜಿ ಸಲ್ಲಿಸಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ಸಂಬಂದಪಟ್ಟ ತಾಲೂಕ ಅಧಿಕಾರಿಯವರಾದ ಶ್ರೀ ಶಂಕರರೆಡ್ಡಿ, ಕೈಗಾರಿಕಾ ವಿಸ್ತರ್ಣಾಧಿಕಾರಿ ಇವರನ್ನು ಕಛೇರಿ ವೇಳೆಯಲ್ಲಿ ಸಂಪರ್ಕಿಸಬಹುದು. ಸಂಪರ್ಕಿಸಬೇಕಾದ ಮೋ.ಸಂ. 9916567147

## 1) ಷರತ್ತುಗಳು:-

1. ಈ ಯೋಜನೆಗಳು ಗ್ರಾಮೀಣ ಪ್ರದೇಶದ ಅಭ್ಯರ್ಥಿಗಳಿಗೆ ಮಾತ್ರ.
2. ಹೊಲಿಗೆಯಂತ್ರಗಳು ಪಡೆಯುವ ಸಾಮಾನ್ಯ/ಇತರೆ ಅಭ್ಯರ್ಥಿಯು ಕನಿಷ್ಠ 18 ರಿಂದ ಗರಿಷ್ಠ 38 ವರ್ಷದವರೆಗೆ ಪರಿಶಿಷ್ಟ ಜಾತಿ ಪರಿಶಿಷ್ಟ ಪಂಗಡ ಅಭ್ಯರ್ಥಿಗಳಿಗೆ ಕನಿಷ್ಠ 18 ರಿಂದ ಗರಿಷ್ಠ 40 ವರ್ಷ ಮೀರಿರಬಾರದು.
3. ಈ ಹಿಂದೆ ಈ ಕಛೇರಿಯಿಂದ ಹೊಲಿಗೆಯಂತ್ರ / ಸುಧಾರಿತ ಸಲಕರಣೆಗಳನ್ನು ಪಡೆದಿದ್ದರೆ ಅಂತಹ ಕುಶಲಕರ್ಮಿಗಳು ಅರ್ಜಿ ಸಲ್ಲಿಸಲು ಅವಕಾಶ ಇರುವುದಿಲ್ಲ.
4. ಪರಿಶಿಷ್ಟ ಜಾತಿ ಪರಿಶಿಷ್ಟ ಪಂಗಡ ಅಭ್ಯರ್ಥಿಗಳು ಜಾತಿ ಪ್ರಮಾಣ ಪತ್ರವನ್ನು ಸಲ್ಲಿಸಬೇಕು.
5. ಒಂದು ಕುಟುಂಬದಲ್ಲಿ ಒಬ್ಬರು ಮಾತ್ರ ಅರ್ಜಿ ಸಲ್ಲಿಸಲು ಅವಕಾಶ ಇರುತ್ತದೆ.

ಸಹಿ/-

ಉಪ ನಿರ್ದೇಶಕರು(ಗ್ರಾಕೈ),
ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ
ಜಿಲ್ಲಾ ಪಂಚಾಯತ್, ಯಾದಗಿರಿ